## ಮದುವೆಗೂ ಸಂಚಕಾರ

ಮಾನಸಿಕ ಅಸ್ವಸ್ಥತೆಯಿಂದ ನರಳಿ, ಗುಣಮುಖಳಾಗಿ ಒಂದು ಮಾತ್ರೆ ಮಾತ್ರ ತೆಗೆದುಕೊಳ್ಳುತ್ತಿದ್ದ ಯುವತಿ ಆಕೆ. ಮದುವೆಯ ವಯಸ್ಸು. ಅಪ್ಪಅಮ್ಮನಿಗೆ ಸಹಜ ಆತಂಕ. ಬಂದು ಕೇಳಿದ್ದರು 'ಡಾಕ್ಟ್ರೇ ಮದುವೆ ಮಾಡ್ಬಹುದಾ?' ನಾನು ಹೇಳಿದ್ದೆ 'ಮಾಡಬಹುದು, ಆದರೆ ಹುಡುಗನ ಕಡೆಯುವರಿಗೆ ಆಕೆ ಮಾತ್ರೆ ತೆಗೆದುಕೊಳ್ಳುವ ವಿಷಯ ಹೇಳಬೇಕು. ಆಕೆಗೆ ಸಂಸಾರ ಮಾಡಲು, ಮಕ್ಕಳಾಗಲು ಯಾವುದೇ ತೊಂದರೆಯಿಲ್ಲ, ಆದರೆ ಮಾತ್ರೆ ತೆಗೆದುಕೊಳ್ಳುವ ವಿಷಯ ಹೇಳಲೇಬೇಕು'. ಹತ್ತು ಜನ ಒಪ್ಪದಿದ್ದರೆ, ಹನ್ನೊಂದನೆಯವರು ಒಪ್ಪುತ್ತಾರೆ, ಎಲ್ಲವೂ ಗೊತ್ತಿರುವ ಒಪ್ಪಿರುವವರ ಜೊತೆ ಸಂಸಾರ ಸುಲಭ. ಸಮಾಜದ ಧೋರಣೆಕಳಂಕದ ಭಯದಿಂದ ಅಪ್ಪಅಮ್ಮ ಹೇಳದೆ ಮದುವೆ ಮಾಡಿದರು. ಗಂಡನ ಮನೆಯಲ್ಲಿ ಮಾತ್ರೆ ತೆಗೆದುಕೊಳ್ಳಲಾಗದೆ, ಕಾಯಿಲೆ ಮರುಕಳಿಸಿತು. ಗಂಡನ ಮನೆಯವರು ವಿಚ್ಛೇದನಕ್ಕೆ ಅರ್ಜಿ ಹಾಕಿದರು! ಇಂತಹ ಸಂದರ್ಭಗಳಲ್ಲಿ ಕಾನೂನೇನೋ ರೋಗಿಯ ಸಹಾಯಕ್ಕಾಗಿ ಇದೆ, ನಿಜ. ಆದರೆ ಒಡೆದ ಮನಸ್ಸುಗಳ ಸಹಾಯಕ್ಕೆ?

ಕೌಟುಂಬಿಕ ಹಿಂಸೆಯ ಕಾನೂನು ಇದೆಯಷ್ಟೆ. ಗಂಡ ಹೊಡೆದುಬಡಿದು ಮಾಡುವ ಹೆಂಗಸರು ಖಿನ್ನತೆಯಿಂದ ನರಳುತ್ತಾ ಬರುತ್ತಾರೆ. ಎಷ್ಟೋ ಬಾರಿ ಪತಿಯನ್ನು ಕರೆಸಿ 'ಹೀಗೊಂದು ಕಾನೂನು ಇದೆ, ಮತ್ತೊಂದು ಸಲ ಹೊಡೆದರೆ ಪೋಲೀಸರಿಗೆ ಹೇಳುತ್ತೇನೆ' ಎಂದು ವೈದ್ಯರು ಹೆದರಿಸಬಹುದಷ್ಟೆ. ಮುಂದಿನ ಬಾರಿಯಿಂದ ಗಂಡನ ಪತ್ತೆಯಿರುವುದಿಲ್ಲ! ಅಕಸ್ಮಾತ್ ಪತ್ನಿಗೇ ಧೈರ್ಯ ನೀಡಿ 'ಹೋಗಿ ದೂರು ನೀಡಿ' ಎಂದರೆ 'ನೀವು ನನಗೇ ಚಿಕಿತ್ಸೆ ನೀಡಿ ಅದನ್ನು ತಡೆದುಕೊಳ್ಳುವ ಶಕ್ತಿ ನೀಡಿ' ಎನ್ನುತ್ತಾರೆಯೇ ಹೊರತು ಕಾನೂನಿನ ಸಹಾಯ ಪಡೆಯಲು ಮುಂದಾಗುವುದಿಲ್ಲ !

ಕೆಲವೊಮ್ಮೆ ಚಿಕಿತ್ಸೆ ಅಗತ್ಯವಿರುವ ರೋಗಿಗೆ ಚಿಕಿತ್ಸೆ ಸಿಗದಿರುವಂತೆ ಅಥವಾ ವೈದ್ಯ ತನ್ನ ಪರಿಣತಿಯಿಂದ ಇಂಥದ್ದೇ ಚಿಕತ್ಸೆ ಕಾಯಿಲೆಗೆ ಸೂಕ್ತ ಎಂದು ನಿರ್ಧರಿಸಿದರೂ ರೋಗಿ ಅದನ್ನು ಒಪ್ಪದೆ ತನಗೆ ಬೇರೆ ಚಿಕಿತ್ಸೆ ನೀಡು ಎಂದು ಕೇಳುವಂತೆ ಮಾಡಬಹುದು. ಸಕ್ಕರೆ ಕಾಯಿಲೆಯಷ್ಟೇ ಬಲವಾದ ವೈಜ್ಞಾನಿಕ ತಳಹದಿ ಮನೋರೋಗಕ್ಕೂ ಇದೆ. ಆದರೆ ಸಕ್ಕರೆ ಕಾಯಿಲೆಯಲ್ಲಿ ನಾವು ನಮಗೆ ಇಂಥದ್ದೇ ಮಾತ್ರೆ ಕೊಡಿ ಎಂದು ವೈದ್ಯರನ್ನು ಕೇಳುತ್ತೇವೆಯೇ? ಆದರೆ ಮಾನಸಿಕ ಕಾಯಿಲೆಗೆ 'ನನಗೆ ಇಂಥ ಚಿಕಿತ್ಸೆಯೇ ಬೇಕು' ಎಂದು ನಮ್ಮ ಅರೆಜ್ಞಾನ– ಅಜ್ಞಾನಗಳಿಂದ ಕೇಳುವ 'ಹಕ್ಕು' ಈ ಕಾನೂನಿನಿಂದ ನಮಗೆ ದೊರೆಯುತ್ತದೆ. ವೈದ್ಯ ರೋಗಿಯ ನಡುವಣ ವಿಶ್ವಾಸವೇ ಮುಖ್ಯ ತಳಹದಿಯಾದ ಮಾನಸಿಕ ರೋಗ ಚಿಕಿತ್ಸೆಯಲ್ಲಿ ಆ ಬಾಂಧವ್ಯವನ್ನು ಒಡೆಯುವಲ್ಲಿ ಈ 'ಹಕ್ಕು' ಮುಖ್ಯ ಸಾಧನವಾಗಿ ನಿಜವಾಗಿ 'ರೋಗಿ'ಯ ರೋಗದ ಹದಗೆಡುವಿಕೆಗೆ ಕಾರಣವಾಗಬಲ್ಲದು. ಹಾಗಾಗಿ ಹೊಸ ಕಾನೂನು ರೋಗಿಯ ಕುಟುಂಬದವರ ಮೇಲೆ, ರೋಗಿಗೆ ಸರಿಯಾಗಿ ಚಿಕಿತ್ಸೆ ನೀಡಿ ಗುಣಮುಖನಾಗುವಂತೆ ಮಾಡುವ ವೈದ್ಯನ ಸಾಮರ್ಥ್ಯದ ಮೇಲೆ ಒಂದು ಹೊರೆಯೇ ಆಗುವ ಸಾಧ್ಯತೆಯಿದೆ.

ಈ ಮಸೂದೆಯ ಎಲ್ಲಕ್ಕಿಂತ ದೊಡ್ಡ ನ್ಯೂನತೆಯೆಂದರೆ ಉಪಯುಕ್ತ ಮತ್ತು ಕಡಿಮೆ ಬೆಲೆಯ 'ವಿದ್ಯುತ್ ಕಂಪನ ಚಿಕಿತ್ಸೆ' ಯ (ECT) ಬಗೆಗೆ ಈಗಾಗಲೇ ಇರುವ ತಪ್ಪಕಲ್ಪನೆ, ಕಳಂಕವನ್ನು ಹೆಚ್ಚಿಸುವ ಕೆಲಸವನ್ನು ಅದು ಮಾಡಿರುವುದು. ವಿದ್ಯುತ್ ಕಂಪನ ಚಿಕಿತ್ಸೆ ಅಪಾಯವಿರದ, ಅಡ್ಡ ಪರಿಣಾಮಗಳಿರದ, ಒಂದು ಅತಿ ಪರಿಣಾಮಕಾರಿ, ತುರ್ತು ಪರಿಸ್ಥಿತಿಯಲ್ಲಿ ಜೀವವುಳಿಸುವ ಚಿಕಿತ್ಸೆ. ಇದರ ಬಗ್ಗೆ ಸರಿಯಾಗಿ ಗೊತ್ತಿರುವುದು ಮನೋವೈದ್ಯರಿಗೆ. ಈ ಚಿಕಿತ್ಸೆಯಿಂದ ಗುಣಮುಖರಾಗಿರುವ ಲಕ್ಷಾಂತರ ರೋಗಿಗಳಿಗೆ ಈ ಚಿಕಿತ್ಸೆಯ ಕ್ರಮದ ಬಗ್ಗೆ ಮಾತ್ರ ನಿಯಮಗಳನ್ನು ಹಾಕುವುದನ್ನು ಬಿಟ್ಟು, ಅದರ ಸರಿಯಾದ ಬಳಕೆಗೂ ಕಠಿಣ ಷರತ್ತುಗಳನ್ನು ಪ್ರಸ್ತುತ ಕಾನೂನು ವಿಧಿಸುತ್ತದೆ. ಸರ್ಕಾರವೇ ಮಾನಸಿಕ ಅಸ್ವಸ್ಥರ ಆರೈಕೆ ಕೇಂದ್ರಗಳನ್ನೂ, ಪುನರ್ವಸತಿ ಕೇಂದ್ರಗಳನ್ನೂ ತೆರೆಯುತ್ತದೆ ಎಂದು ಕಾನೂನು ಹೇಳುತ್ತದೆ. ಸಮಯಾವಧಿ, ಆರ್ಥಿಕತೆ, ಸೇವೆಗಳು ಯಾವುದರ ಬಗ್ಗೆಯೂ ಮಾತನಾಡುವುದಿಲ್ಲ!

ಮಾನಸಿಕ ಆರೋಗ್ಯದ ಈ ಕಾನೂನು ರೂಪುಗೊಳ್ಳಲು ತೆಗೆದುಕೊಂಡಿದ್ದು ಸುಮಾರು 45 ವರ್ಷಗಳು. ಈಗಲೂ ಪೂರ್ಣಪ್ರಮಾಣದಲ್ಲಿ ಅದರ ಅನುಷ್ಠಾನವಾಗಿಲ್ಲ. ಈಗ ಬರುತ್ತಿರುವ 'ಆರೈಕೆಯ ಕಾನೂನು' ನಿಂತಿರುವುದು **UN Convention on the rights of persons with disabilities** ಮೇಲೆ. ಅಂದರೆ ಮಾನವ ಹಕ್ಕುಗಳಿಗೆ ಒತ್ತು ಕೊಟ್ಟು. ಬರೀ ಕಾಗದದ ಕಾನೂನು ನಮ್ಮ ಮೂಲಭೂತ ಧೋರಣೆಗಳನ್ನು, ಸೌಲಭ್ಯಗಳನ್ನು ಬದಲಿಸದೆ ಹೆಚ್ಚಿನ ಬದಲಾವಣೆ ಉಂಟು ಮಾಡದು. ಹಾಗಾಗಿ ತನ್ನ ದೋಷಗಳನ್ನು ಸರಿಪಡಿಸಿಕೊಂಡು, ಯೋಜನೆಗಳೆಡೆಗೂ ಪ್ರಾಯೋಗಿಕವಾಗಿ ಗಮನ ನೀಡಿದರೆ ಮಾತ್ರ ಇದು ನಿಜವಾಗಿ 'ಮಾನಸಿಕ ಅನಾರೋಗ್ಯದ ಆರೈಕೆ'ಯ 'ಮಾನಸಿಕ ಆರೋಗ್ಯ'ದ ಕಾನೂನು ಎಂದೆನಿಸೀತು.

